# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ

# ನಾಲ್ವತ್ತು ವರ್ಷಗಳು




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Lyn Doerksen


60ರ 12ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada



ದೇವರು ಇಸ್ರಾಯೆಲ್ಯರನ್ನು ಐಗುಪ್ತರಿಂದ ಪಾರುಮಾಡುವಾಗ, ಮೋಶೆ ಜನರನ್ನು ಆರಾಧನೆಯಲ್ಲಿ ನಡೆಸಿದನು. ಅವನು ಒಂದು ಜಯದಗೀತೆಯನ್ನು ರಚಿಸಿ, "ಯೋಹೋವನ ಸ್ತೋತ್ರವನ್ನು ಗಾಣಮಾಡೋಣ ಆತನು ಮಹಾ ಜಯಶಾಲಿಯಾದನು" ಎಂದು ದೇವರು ಮಾಡಿದ ಎಲ್ಲಾ ದೊಡ್ಡ ಕಾರ್ಯಗಳನ್ನು ಮೋಶೆ ಹಾಡುತ್ತ ಕೊಂಡಾಡಿದನು.







ಮೂರು ದಿನಗಳನಂತರ ಮರುಭೂಮಿಯಲ್ಲಿ ಜನರು ಒಂದು ಕೋಳವನ್ನು ಕಂಡರು, ಆದರೆ ಅಲ್ಲಿ ನೀರು ಕಹಿಯಾಗಿದ್ದದರಿಂದ ಕುಡಿಯಲಾಗಲಿಲ್ಲ ಪ್ರಾರ್ಥನೆಯ ಬದಲಾಗಿ ಜನರು ದೂರಿದರು. ದೇವರು ಬಹಳ ಕರುಣೆಯನ್ನು ತೋರಿಸಿ,



ನೀರು ಕುಡಿಯಲು ಉತ್ತಮವಾಗುವಂತೆ ಮಾಡಿದನು.



ಜನರು ಎಲ್ಲದಕ್ಕೂ ದೂರಿದ ಹಾಗೆ ಕಾಣಿಸಿತು “ಐಗುಪ್ತದಲ್ಲಿ ನಮಗೆ ಆಹಾರ ಸಿಗುತ್ತಿತ್ತು ಆದರೆ ಈ ಮರುಭೂಮಿಯಲ್ಲಿ ಹಸಿವೆಯಿಂದ ಸಾಯುತ್ತಲಿದ್ದೇವೆ ಎಂದು ಅಳತೊಡಗಿದರು.” ಆ ಸಂಜೆ ದೇವರು ಲಾವಕ್ಕಿಗಳೆಂಬ ಪಕ್ಷಿಗಳನ್ನು ಕಳುಹಿಸಲು ಜನರು ಅವುಗಳನ್ನು ಸುಲಭವಾಗಿ ಹಿಡಿದರು.

3



ಮರುದಿನ ದೇವರು ಮನ್ನಾ ಎಂಬ ಆಹಾರವನ್ನು ಒದಗಿಸಿದನು ಅದು ಬೀಳಿ ಕೊತ್ತಂಬರಿ ಕಾಳಿನಂತಿದ್ದು ರುಚಿಯಲ್ಲಿ ಜೇನುತುಪ್ಪ ಕಲಿಸಿದ ದೋಸೆಗಳ ಹಾಗಿತ್ತು.

ಪ್ರತಿ ದಿನ ಮನ್ನ ಆಹಾರಕ್ಕಾಗಿ ಜನರು ಎದುರು ನೋಡುತ್ತಿದ್ದರು. ಈ ರೀತಿಯಲ್ಲಿ ದೇವರು ನಾಲ್ವತ್ತು ವರ್ಷ ಒದಗಿಸಿದನು.

4

ಪ್ರತಿದಿನ ಹೊಸ ಆಹಾರಕ್ಕಾಗಿ ಅವರು ದೇವರಲ್ಲಿ ಬರವಸಯಿಡಬೇಕಾಯಿತು. ನಾಳೆಯವರೆಗೆ ಹೆಚ್ಚಾಗಿ ಮನ್ನವನ್ನು ಸಂಗ್ರಹಿಸಿಕೋಳ್ಳಬೇಡಿ ಎಂದು ದೇವರು ಹೇಳಿದ್ದಾಗ್ಯೂ ಜನರು ಸೇಖರಿಸಿಕೊಂಡರು. ಆದರೆ ಅದು ಮರು ದಿವಸದ್ದಲ್ಲಿ ಕೆಟ್ಟುಹೋಗುತ್ತಿತ್ತು.



5

ನಿನ್ನೆಯ ಮನ್ನವನ್ನು ನಾಳೆಗೋಸ್ಕರ ಸೇಖರಿಸಿಕೊಂಡಿದ್ದರೆ ಅದಕ್ಕೆ ಹುಳು ಹತ್ತುತಿತ್ತು ಆದರೆ ಸಬ್ಬತ್ ದಿನವನ್ನು ಹೊರತುಪಡಿಸಿ ಆ ವಿಶೇಷವಾದ ಏಳನೆಯ ದಿನದಂದು ಜನರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಸೇಖರಿಸಿದ್ದ ನಿನ್ನೆಯ ಮನ್ನವನ್ನು ಆವತ್ತು ತಿನ್ನುತ್ತಿದ್ದರು.



6

ದೇವರು ಇಸ್ರಾಯೆಲ್ಯರಿಗೆ ಮರುಭೂಮಿಯಲ್ಲಿ ಅವರಿಗೆ ಬೇಕಾದ ಆಹಾರ ನೀರನ್ನು ಒದಗಿಸುವುದಲ್ಲದೆ ವೈರಿಗಳಿಂದಲು ಸಹ ಕಾಪಾಡಿದನು.

ಅಮಾಲೇಕ್ಕರೂ ಇಸ್ರಾಯೆಲ್ಯರ ಮೇಲೆ ಯುದ್ದಕ್ಕೆ ಬಂದಾಗ, ಮೋಶೆ ದೇವರ ಕೋಲನ್ನು ಎಷ್ಟರವರಗೆ ಮೇಲಕ್ಕೆ ಎತ್ತಿ ಹಿಡಿದನು ಅಷ್ಟರವರೆಗೆ ಇಸ್ರಾಯೆಲ್ಯರು ಗೆಲ್ಲುತ್ತಿದ್ದರು.



7



“ನೀವು ನನ್ನ ಮಾತಿಗೆ ವಿಧೆಯರಾಗುವುದಾದರೆ ನೀವು ನನಗೆ ವಿಶೇಷವಾದ ಜನಾಂಗವಾಗುವಿರಿ” ಎಂದು ದೇವರು ಹೇಳಿರಲಾಗಿ “ದೇವರು ಹೇಳಿದಹಾಗೆ ಮಾಡುವೆವು” ಎಂದು ಜನರು ಮೋಶೆಗೆ ಹೇಳಿದರು. ಅವರೆಲ್ಲರೂ ಸಿನಾಯ್ ಬೆಟ್ಟಕ್ಕೆ ಬಂದಾಗ, ಮೋಶೆ ದೇವರ ಬಳಿಯಿಂದ ಬರುವವರಿಗೆ ಅಲ್ಲೆ ಕಾಯ್ದುಕೊಂಡಿದ್ದರು.

8



ಮೋಶೆ ದೇವರೊಂದಿಗೆ ಬೆಟ್ಟದಲ್ಲಿ ೪೦ ದಿವಸ ಕಳೆದನು. ದೇವರು ದಶಾಜ್ಞೆಗಳನ್ನು ಎರಡು ಹಲಗೆಗಳ ಮೇಲೆ ಬರೆದನು. ಆತನು ಜನರು ಹೇಗೆ ಜೀವಿಸಬೇಕೆಂಬುದನ್ನು ಮೋಶೆಗೆ ತಿಳಿಯಪಡಿಸಿದನು.

9

1. ನಾನಲ್ಲದೆ ನಿಮಗೆ ಬೇರೆ ದೇವರುಗಳಿರಬಾರದು.
2. ಯಾವ ಮೂರ್ತಿಯನ್ನಾಗಲಿ ಅಥವಾ ರೂಪವನ್ನು ಮಾಡಿ ಅಡ್ಡಬೀಳಬಾರದು.
3. ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯಕಾರ್ಯಕ್ಕಾಗಿ ಎತ್ತಬಾರದು.
4. ಸಬತ ದಿನವನ್ನು ದೇವರ ದಿನವೆಂದು ಆಚರಣೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.
5. ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.

10

6. ನರಹತ್ಯ ಮಾಡಬಾರದು.
7. ವ್ಯಭಿಚಾರ ಮಾಡಬಾರದು.
8. ಕದಿಯಬಾರದು.
9. ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.
10. ಮತ್ತೊಬ್ಬನ ಮನೆಯನ್ನಾಗಲಿ, ಗಂಡಾಳು ಹೆಣ್ಣಾಳು ಕತ್ತೆ ಎತ್ತು ಮುಂತಾದ ಯಾವುದನ್ನು ಆಶಿಸಬಾರದು.

11



ಮೋಶೆಯು ಸಿನಾಯ ಬೆಟ್ಟದಲ್ಲಿ ದೇವರ ಸಂಗಡ ಇರುವಾಗ ಇಸ್ರಾಯೆಲ್ಯರು ಅತಿಭಯಂಕರವಾದ ಒಂದು ತಪ್ಪನ್ನು ಮಾಡಿದರು ಅವರು ಆರೋನನಿಗೆ ಒಂದು ಚಿನ್ನದ ಬಸವನ ಮೂರ್ತಿಯನ್ನು ಮಾಡಲು ಹೇಳಿ ದೇವರ ಬದಲಾಗಿ ಅದನ್ನು ಆರಾಧಿಸಿದರು ದೇವರು ಅವರ ಮೇಲೆ ಬಹು ಕೋಪಗೊಂಡನು ಹಾಗೆಯೇ ಮೋಶೆಯು ಸಹ.

12



ಜನರು ಬಸವನ ಮೂರ್ತಿಯ ಮುಂದೆ ಕುಣಿಯುತ್ತಿರುವುದನ್ನು ಕಂಡು ಮೋಶೆ ಕಲ್ಲಿನ ಹಲಗೆಗಳನ್ನು ಮುರಿದುಹಾಕಿದನು. ಕೋಪದಿಂದ ಆ ಬಂಗಾರದ ಮೂರ್ತಿಯನ್ನು ಸಹ ನಾಶಮಾಡಿದನು. ಯಾರರು ಅದನ್ನು ಆರಾಧಿಸಿದರೊ ಅಂಥವರನ್ನು ಕೊಂದುಹಾಕಿದನು.

13

ದೇವರು ಆ ಎರಡು ಹಲಗೆಗಳನ್ನು ಮತ್ತೆ ಬರೆಸಿದನು. ಆತನು ಮೋಶೆಗೆ ಒಂದು ದೇವದರ್ಶನದ ಗುಡಾರವನ್ನು ಅದರ ಸುತ್ತಲೂ ಬೇಲಿಯನ್ನು ಹಾಕಿ ಅಲ್ಲಿ ಆತನ ಜನರೊಂದಿಗೆ ದೇವರು ನೆಲೆಸಲು ಇಚ್ಚಿಸಿದನು ಅಲ್ಲಿ ದೇವರನ್ನು ಆರಾಧಿಸಬೇಕು. ಅಗ್ನಿ ಸ್ಥಂಬವಾಗಿಯೂ ಮೇಘಸ್ತಂಬವಾಗಿಯೂ ದೇವರು ಅವರ ಸಂಗಡ ಇದ್ದನು.





14

ಅವರು ಕಾನನ್ ದೇಶಕ್ಕೆ ಸಮೀಪಿಸಿದಾಗ, ಮೋಶೆ ಹನ್ನೆರಡು ಜನರನ್ನು ದೇವರು ಕೋಡುತ್ತೆನೆಂದು ವಾಗ್ದಾನ ಮಾಡಿದ್ದ ದೇಶಕ್ಕೆ ಸಂಚರಿಸಿ ನೋಡುವುದಕ್ಕಾಗಿ ಕಳುಹಿಸಿದನು. ಸಂಚರಿಸಿಬಂದ ಎಲ್ಲರೂ ಅದು ಅದ್ಭುತವಾದ ಪ್ರದೇಶ ಎಂದು ಹೇಳಿದರು ಆದರೆ ಇಬ್ಬರೂ, ಕಾಲೇಬ ಮತ್ತು ಯೇಹೋಶುವ, ಎಂಬುವವರು ಮಾತ್ರ ದೇವರ ಸಹಾಯದಿಂದ ಆ ಪ್ರದೇಶವನ್ನು ಸ್ವಾಧಿನಪಡಿಸಿಕೊಳ್ಳಬಹುದು ಎಂದು ನಂಬಿದರು.



15

ಸಂಚರಿಸಿಬಂದ ಹತ್ತು ಗೂಡಾಚಾರರು ಆ ಪ್ರದೇಶದ ದೊಡ್ಡ ಪಟ್ಟಣಗಳನ್ನು ಹಾಗೂ ಅಲ್ಲಿದ್ದ ಎತ್ತರವಾದ ಮನುಷ್ಯರನ್ನು ಕಂಡು ಹೆದರಿದರು. “ಆ ಪ್ರದೇಶವನ್ನು ನಾವು ಸ್ವಾಧಿನಪಡಿಸಿಕೊಳ್ಳಲಾಗದು” ಎಂದು ನರಳಾಡಿದರು ಆದರೆ ದೇವರು

ಅವರನ್ನು ಐಗುಪ್ತದಿಂದ ಬಿಡಿಸಲು ಎಂತಹ ಕಾರ್ಯಗಳನ್ನು ಮಾಡಿದನೆಂಬುದನ್ನು ಅವರು ಮರೆತರು.



16

ಜನರು ನಂಬಿಕೆಯಿಲ್ಲದ ಹತ್ತು ಗೂಡಾಚಾರರನ್ನು ಹಿಂಬಾಲಿಸಿದರು. ಅವರು ಅತ್ತು ಮತ್ತೆ ಐಗುಪ್ತಕ್ಕೆ ಮರಳಲು ಸಿದ್ಧರಾದರು. ಅದಲ್ಲದೆ ಅವರು ಮೋಶೆಯನ್ನು ಕೋಲ್ಲಲು ಪ್ರಯತ್ನಿಸಿದರು.



17

ದೇವರು ಮೋಶೆಯನ್ನು ರಕ್ಷಿಸಿ ಜನರಿಗೆ ಹೀಗೆಂದನು, ನೀವು ೪೦ ವರ್ಷಗಳಕಾಲ ಈ ಮರಭೂಮಿಯಲ್ಲಿ ಅಲೆಯುವಿರಿ, ಆದರೆ ಕಾಲೇಬನು ಮತ್ತು ಯೋಹೋಶುವನು ಹಾಗೆಯೇ ನೀಮ್ಮ ಮಕ್ಕಳು ಮಾತ್ರ ವಾಗ್ದಾನಮಾಡಿದ ಪ್ರದೇಶದಲ್ಲಿ ಸಂಚರಿಸುವರು.



18

ನಾಲ್ವತ್ತು ವರ್ಷಗಳು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ವಿಮೋಚನೆಕಾಂಡ 15 ರಿಂದ ಅರಣ್ಯಕಾ0ಡ 14**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**